# I ಕಾರ್ಯಕಾರಿ ಸಾರಾಂಶ

## ಹಿನ್ನೆಲೆ

ವಿಶೇಷ ಘಟಕ ಯೋಜನೆಯನ್ನು ಆರನೇ ಪಂಚವಾರ್ಷಿಕ ಯೋಜನೆ (1980–85)ಯಿಂದ ಹಾಗೂ ಬುಡಕಟ್ಟು ಉಪಯೋಜನೆಯನ್ನು ಐದನೇ ಪಂಚವಾರ್ಷಿಕ ಯೋಜನೆ (1975–80)ಯಿಂದ ಜಾರಿಗೊಳಿಸಲಾಯಿತು. ಆದರೆ ಪ್ರಸಕ್ತ ಅಧ್ಯಯನಕ್ಕಾಗಿ ಈ ಎರಡು ಯೋಜನೆಗಳಡಿ 2013–14ರಿಂದ 2016–17ರ ಅವಧಿಯಲ್ಲಿ ನಿರ್ವಹಿಸಿದ ಕಾಮಗಾರಿಗಳ ಮೌಲ್ಯಮಾಪನವನ್ನು ಕೈಗೊಳ್ಳಲಾಗಿರುತ್ತದೆ. ಈ ಎರಡು ಯೋಜನೆಗಳಲ್ಲೂ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯ್ದ ವ್ಯಕ್ತಿಗಳಿಗೆ ಸೌಕರ್ಯಗಳನ್ನು ಒದಗಿಸಲು ಹನ್ನೊಂದು ಕಾರ್ಯಕ್ರಮಗಳನ್ನು ಗುರುತಿಸಲಾಗಿರುತ್ತದೆ.

- ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿವೆ:
- ಫಲಾನುಭವಿಗಳ ಸಾಮಾಜಿಕ – ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು.
- ಫಲಾನುಭವಿಗಳ ಜೀವನ ಶೈಲಿಯನ್ನು ಉತ್ತಮಗೊಳಿಸುವುದು
- ಅರಣ್ಯದ ಮೇಲಿನ ಒತ್ತಡವನ್ನು ಕಡಿಮೆ ಮಾಡಿ, ಸಮುದಾಯಗಳ ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಹಾಗೂ ಪರಿಸರ ರಕ್ಷಣೆಯನ್ನು ಮಾಡುವುದು.
- ಅರಣ್ಯದ ಹೊರಗೆ ಮರಗಳು ಹೆಚ್ಚು ಬೆಳೆಯುವಂತೆ ಮಾಡುವುದು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗಾಗಿ ಅಸ್ತಿತ್ವದಲ್ಲಿರುವ ಆಯ್ದ ಯೋಜನೆಗಳನ್ನು ಜಾರಿಗೊಳಿಸುವ ಪ್ರಕ್ರಿಯೆ ಮತ್ತು ಅವುಗಳ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಈ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ. ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಗಳಡಿ ಕರ್ನಾಟಕ ಅರಣ್ಯ ಇಲಾಖೆಯು 2013–14ರಿಂದ 2016–17ರ (4 ವರ್ಷಗಳ) ಅವಧಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ.

ಈ ಎರಡು ಯೋಜನೆಗಳ ಅಡಿಯಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳೆಂದರೆ ಅಡುಗೆ ಅನಿಲ, ಅಸ್ತ್ರ ಒಲೆ, ಸರಳ ಒಲೆ (ಹೊಗೆರಹಿತ ಒಲೆಗಳು), ಜೈವಿಕ ಇಂಧನದ ಘಟಕ, ಸೌರ ದೀಪಗಳು, ಸೋಲಾರ್ ನೀರಿನ ಹೀಟರ್, ಸಾಮಾಜಿಕ ಭದ್ರತಾ ನೆಡುತೋಪುಗಳು, ಹಣ್ಣಿನ ನೆಡುತೋಪುಗಳು, ಮೇವಿನ ಜಮೀನು, ಜೇನುನೊಣ ಸಾಕಣಿಕೆಗಾಗಿ ಪೆಟ್ಟಿಗೆ ಮತ್ತು ಗಳ/ಬಿದಿರು ವಿತರಣೆ.

## ದತ್ತಾಂಶ ಮತ್ತು ವೈಧಾನಿಕತೆ

ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳ ಅಭಿವೃದ್ಧಿಗಾಗಿ ರೂ. 8739.66 ಲಕ್ಷಗಳನ್ನು ಮೇಲ್ಕಂಡ 11 ಕಾರ್ಯಕ್ರಮಗಳಿಗಾಗಿ ವ್ಯಯ ಮಾಡಲಾಗಿದೆ. 2013–14ರಿಂದ 2016–17ರ ಅವಧಿಯಲ್ಲಿ, 14 ಅರಣ್ಯ ವೃತ್ತಗಳಲ್ಲಿ 22420 ಗ್ರಾಮಗಳಲ್ಲಿ 177183 ಕುಟುಂಬಗಳನ್ನು ಈ ಕಾರ್ಯಕ್ರಮಗಳ ವ್ಯಾಪ್ತಿಗೆ ತರಲಾಗಿತ್ತು. ಹಾಗೆಯೇ, ಪರಿಶಿಷ್ಟ ಬುಡಕಟ್ಟು ಉಪಯೋಜನೆಗಾಗಿ, ರೂ. 3958.17 ಲಕ್ಷ ರೂಪಾಯಿಗಳನ್ನು 14 ಅರಣ್ಯ ವೃತ್ತಗಳಲ್ಲಿ 2013–14 ರಿಂದ 2016–17ರ ಅವಧಿಯಲ್ಲಿ 81193 ಫಲಾನುಭವಿಗಳನ್ನು 9948 ಗ್ರಾಮಗಳಲ್ಲಿ ಈ ಕಾರ್ಯಕ್ರಮಗಳ ಅಡಿಯಲ್ಲಿ ತರಲಾಗಿತ್ತು.

ಮಾದರಿ ಫಲಾನುಭವಿಗಳ ಆಯ್ಕೆಗಾಗಿ ಅರಣ್ಯ ಇಲಾಖೆಯಿಂದ ಕೈಗೊಳ್ಳಲಾದ ಎಲ್ಲ ಕಾರ್ಯಕ್ರಮಗಳ ಸಂಪೂರ್ಣ ಪಟ್ಟಿಯನ್ನು ಅಧ್ಯಯನಕ್ಕಾಗಿ ನೀಡಲಾಗಿತ್ತು. ಎಲ್ಲ ವಿಭಾಗಗಳಲ್ಲಿ ಮಾದರಿಯನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗಿತ್ತು. ಅಧ್ಯಯನಕ್ಕಾಗಿ ಇಡಿ ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಯಲ್ಲಿ 2942 ಜನರನ್ನು ಹಾಗೂ ಬುಡಕಟ್ಟು ಉಪಯೋಜನೆಯಲ್ಲಿ 1767 ಜನರನ್ನು ಮಾದರಿಯಾಗಿ ಆಯ್ಕೆ ಮಾಡಲಾಗಿದ್ದು, ಹಾಗೆ ಮಾಡುವಾಗ 11 ಕಾರ್ಯಕ್ರಮಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ಅರಣ್ಯ ಇಲಾಖೆ ಕಾರ್ಯಕ್ರಮಗಳ ಕಾರ್ಯವೈಖರಿಯ ಮೌಲ್ಯಮಾಪನ ಮಾಡಲು ತಯಾರಿಸಿದ ಆ್ಯಂಡ್ರಾಯಿಡ್ ಆ್ಯಪ್ ಬಳಸಿ, ಪ್ರಶ್ನಾವಳಿಯ ಮೂಲಕ ಫಲಾನುಭವಿಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರೊಡನೆ ಆಳವಾದ ಸಂದರ್ಶನಗಳು ಹಾಗೂ ಕೇಂದ್ರೀಕೃತ ಗುಂಪು ಚರ್ಚೆಗಳನ್ನು ನಡೆಸಲಾಯಿತು. ಪ್ರಧಾನ ಶೋಧಕರು ಮತ್ತು ರಾಜ್ಯದ ಸಂಚಾಲಕರು ವಿವಿಧ ವೃತ್ತಗಳಿಗೆ

ಭೇಟಿಯಿತ್ತು, ಫಲಾನುಭವಿಗಳು ಮತ್ತು ಇಲಾಖಾ ಅಧಿಕಾರಿಗಳಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿದರು. ಆ್ಯಪ್‌ನ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಕರ್ನಾಟಕ ಅರಣ್ಯ ಇಲಾಖೆಯ ವೆಬ್‌ಸೈಟ್‌ಗೆ ವರ್ಗಾಯಿಸಿ, ಅಲ್ಲಿಂದ ಔಟ್‌ರೀಚ್ ಸಂಸ್ಥೆಗೆ ಆಳವಾದ ವಿಶ್ಲೇಷಣೆಗಾಗಿ ವರ್ಗಾಯಿಸಲಾಯಿತು. ಆ್ಯಪ್‌ನ ಮಾಹಿತಿ ವಿವಿಧ ವಿಭಾಗ ಕಛೇರಿಗಳು ಹಾಗೂ ಕೇಂದ್ರೀಕೃತ ಗುಂಪು ಸಂದರ್ಶನಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ವೃತ್ತ / ವಿಭಾಗವಾರು ವಿಶ್ಲೇಷಿಸಲಾಗಿದೆ.

## ಅಧ್ಯಯನದ ಪ್ರಮುಖ ಫಲಿತಾಂಶಗಳು

### 1. ಎರಡು ಯೋಜನೆಗಳಡಿ ಅಡುಗೆ ಅನಿಲದ ವಿತರಣೆ

ಎ. ವಿಶೇಷ ಘಟಕ ಯೋಜನೆಯಲ್ಲಿ 95.14%ರಷ್ಟು ಫಲಾನುಭವಿಗಳು ಮತ್ತು ಬುಡಕಟ್ಟು ಉಪಯೋಜನೆಯಲ್ಲಿ 92.95% ರಷ್ಟು ಫಲಾನುಭವಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದಿದ್ದು, ಅದರಲ್ಲಿ ನೀಡಲಾದ ಆಸ್ತಿಗಳನ್ನು ನಿರ್ವಹಿಸಿ, ಬಳಸುತ್ತಿದ್ದಾರೆ.

ವಿಶೇಷ ಘಟಕ ಯೋಜನೆ ಮತ್ತು. ಬುಡಕಟ್ಟು ಉಪಯೋಜನೆಯ ಯಶಸ್ಸನ್ನು ವರ್ಷವಾರು ಶೇಕಡಾವಾರುಗಳಲ್ಲಿ ಈ ಕೆಳಗೆ ನೀಡಲಾಗಿದೆ.

| ಯೋಜನೆ | 2013–14 | 2014–15 | 2015–16 | 2016–17 |
|---|---|---|---|---|
| ವಿಶೇಷ ಘಟಕ ಯೋಜನೆ | 93.81 | 98.23 | 98.44 | 92.32 |
| ಬುಡಕಟ್ಟು ಉಪಯೋಜನೆ | 76.14 | 97.65 | 98.18 | 93.75 |

ಅಡುಗೆ ಅನಿಲವನ್ನು ಒಂದು ಬಾರಿಯಾದರೂ ಮರುಭರ್ತಿ ಮಾಡಿರುವವರನ್ನು ಯಶಸ್ಸನ್ನು ಅಳೆಯುವುದರಲ್ಲಿ ಪರಿಗಣಿಸಲಾಗಿದೆ.

ಬಿ. ಸಂಪೂರ್ಣ ಪ್ರದೇಶದಲ್ಲಿ ಫಲಾನುಭವಿಗಳು, ಇಂದಿಗೂ ರಾಗಿ ಮುದ್ದೆ, ಜೋಳದ ರೊಟ್ಟಿ ಮುಂತಾದುವುಗಳ ತಯಾರಿಗೆ ಸೌದೆಯನ್ನು ಬಳಸುತ್ತಾರೆ ಎಂದು ತಿಳಿದು ಬಂತು.

ಸಿ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಅನೇಕ ಸಮುದಾಯಗಳ ವರ್ತನೆಯಲ್ಲಿ ಬದಲಾವಣೆ ಕಂಡು ಬರುತ್ತಿದೆ. ಸೌದೆಯನ್ನು ಬಳಸಿ ಅಡುಗೆ ಮಾಡುವುದನ್ನು ಅವರು ತೊರೆಯುತ್ತಾ ಬಂದಿದ್ದು, ತಮ್ಮ ತಾಯಂದಿರು/ಅತ್ತೆಯಂದಿರು ಒತ್ತಡ ತಂದರೂ ಅದನ್ನು ಮನ್ನಿಸದೆ ಅಡುಗೆ ಅನಿಲವನ್ನು ಬಳಸುವುದನ್ನು ಕಾಣಬಹುದು.

ಡಿ. ಹೆಚ್ಚುತ್ತಿರುವ ಬೆಲೆಗಳ ಕಾರಣದಿಂದಾಗಿ, ಸಿಲಿಂಡರ್ ಮರು ಭರ್ತಿ ಮಾಡಲು ಆಗದಿರುವಂಥ ಪರಿಸ್ಥಿತಿಯಲ್ಲಿರುವ ಕುಟುಂಬಗಳನ್ನೂ ಕಾಣಬಹುದು. ಕೆಲ ಎಜೆನ್ಸಿಗಳೂ ಗ್ರಾಮೀಣ ಪ್ರದೇಶಗಳಿಗೆ ಸಿಲಿಂಡರ್ ಸರಬರಾಜು ಮಾಡಲು ಹೆಚ್ಚುವರಿ ಮೊತ್ತವನ್ನೂ ಸಂಗ್ರಹಿಸುತ್ತವೆ. ಗ್ರಾಮಗಳಲ್ಲಿ, ಸಿಲಿಂಡರ್‌ಗಳು ಕಾಳಸಂತೆಯಲ್ಲಿ ಲಭ್ಯವಿದ್ದು, ಅವುಗಳನ್ನು ಕೊಂಡಾಗ ಬ್ಯಾಂಕ್ ಖಾತೆಗೆ ಸಹಾಯಧನ ವರ್ಗಾವಣೆಯಾಗುವುದಿಲ್ಲ. ಅನಕ್ಷರಸ್ಥ ಕುಟುಂಬಗಳನ್ನು ಕೆಲ ಏಜೆನ್ಸಿಗಳು ಮೋಸ ಮಾಡುವುದೂ ಉಂಟು. ರಾಜ್ಯದಾದ್ಯಂತ ಕೇಳಿ ಬಂದ ಒಂದು ಮಾತೆಂದರೆ, ಕೆಲ ಕುಟುಂಬಗಳ ಬ್ಯಾಂಕ್ ಖಾತೆಗಳಿಗೆ ಸಹಾಯಧನ ವರ್ಗಾವಣೆಯಾಗುವುದಿಲ್ಲ ಎಂಬುದು. ಕರ್ನಾಟಕ ಅರಣ್ಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳೆರಡೂ, ಗ್ಯಾಸ್ ಸಿಲಿಂಡರ್ ಮರುಭರ್ತಿ ಪ್ರಕ್ರಿಯೆಯನ್ನು ಕುರಿತಂತೆ ಫಲಾನುಭವಿ ಕುಟುಂಬಗಳಲ್ಲಿ ಜಾಗೃತಿ ಮೂಡಿಸಬೇಕು, ಅಧಿಕೃತ ಏಜೆನ್ಸಿಗಳ ಬಗ್ಗೆ ಅವರಿಗೆ ಸೂಕ್ತ ಮಾಹಿತಿ ನೀಡುವುದೇ ಅಲ್ಲದೆ, ಕೆಲವು ಪ್ರಕರಣಗಳನ್ನು ಮೇಲ್ವಿಚಾರಣೆಗೆ ಒಳಪಡಿಸಬೇಕು.

### 2. ಅಸ್ತ್ರ ಒಲೆ ಮತ್ತು ಸರಳ ಒಲೆ ವಿತರಣೆ :

ಉಜ್ವಲ ಯೋಜನೆಯಡಿಯಲ್ಲಿ ಹಾಗೂ ಈ ಎರಡು ಯೋಜನೆಗಳಡಿಯಲ್ಲಿ ಅಡುಗೆ ಅನಿಲ ಸಿಲಿಂಡರ್‌ಗಳ ಹಂಚಿಕೆಯಾಗಿದ್ದು, ಇಂದು ಅನೇಕ ಕುಟುಂಬಗಳು ಅಸ್ತ್ರ ಒಲೆ ಹಾಗೂ ಸರಳ ಒಲೆಗಳ ಬಳಕೆಯನ್ನು ನಿಲ್ಲಿಸಿಬಿಟ್ಟಿವೆ. ಆದರೆ, ಇಂದಿಗೂ ಸಿಲಿಂಡರ್‌ಗಳನ್ನು ಮರುಭರ್ತಿ ಮಾಡಲು ಹಣವಿಲ್ಲದಂಥ ಕುಟುಂಬಗಳು ಇವೆ. ಇವುಗಳಲ್ಲಿ ಅನೇಕ ಕುಟುಂಬಗಳು ಇಂಧನವನ್ನು ಉಳಿಸುವಂಥ ಒಲೆಗಳನ್ನು ಬಳಸುತ್ತಿವೆ. ಆದರೆ ಇವುಗಳ ಪ್ರಮಾಣ 25% ರಿಂದ 45% ರಷ್ಟಿದೆ. ಕರ್ನಾಟಕ ಅರಣ್ಯ ಇಲಾಖೆಯು ಕೂಡ ಈ ಕಾರ್ಯಕ್ರಮಗಳನ್ನು ಈಗ ನಿಲ್ಲಿಸಿದೆ. ಪ್ರಸಕ್ತ ಅಧ್ಯಯನ ಇದನ್ನು ಸಾಬೀತು ಪಡಿಸುತ್ತದೆ. ಆದರೆ ಅಡುಗೆ ಅನಿಲದ ಬೆಲೆ ಹೀಗೆಯೇ ಹೆಚ್ಚಾಗುತ್ತಾ ಹೋದ ಹಾಗೆಲ್ಲ ಒಲೆಗಳನ್ನು ಹಂಚುವ ಯೋಜನೆ ಮರು ಆರಂಭವಾಗಬಹುದು.

### 3. ಜೈವಿಕ ಅನಿಲ ಘಟಕಗಳ ಅಳವಡಿಕೆ :

ವಿಶೇಷ ಘಟಕ ಯೋಜನೆಯ 20%ರಷ್ಟು ಫಲಾನುಭವಿಗಳು ಹಾಗೂ ಬುಡಕಟ್ಟು ಉಪಯೋಜನೆಯ 14.71%ರಷ್ಟು ಫಲಾನುಭವಿಗಳು ಮಾತ್ರ ಈ ಕಾರ್ಯಕ್ರಮಗಳ ಪ್ರಯೋಜನವನ್ನು ಪಡೆದಿದ್ದಾರೆ. ಕಾರ್ಯಕ್ರಮದ ವರ್ಷವಾರು ಯಶಸ್ಸಿನ ಚಿತ್ರಣ ಶೇಕಡಾವಾರುಗಳಲ್ಲಿ ಕೆಳಗಿನಂತಿದೆ.

| ಯೋಜನೆ | 2013–14 | 2014–15 | 2015–16 | 2016–17 |
|---|---|---|---|---|
| ವಿಶೇಷ ಘಟಕ ಯೋಜನೆ | 15.38 | 25.00 | – | – |
| ಬುಡಕಟ್ಟು ಉಪಯೋಜನೆ | 66.67 | – | 8.33 | – |

ಕೆಲವು ಪ್ರಕರಣಗಳಲ್ಲಿ, ಈ ಘಟಕಗಳನ್ನು ಜಾನುವಾರುಗಳು ತೀರಾ ಕಡಿಮೆ ಸಂಖ್ಯೆಯಲ್ಲಿರುವ ಕುಟುಂಬಗಳ ವಾಸಸ್ಥಳಗಳಲ್ಲಿ ಸ್ಥಾಪಿಸಿರುವುದನ್ನು ಕಾಣಬಹುದು. ಇದರಿಂದ ಈ ಘಟಕಗಳಿಗೆ ಅಗತ್ಯವಾದ ಸಗಣಿ ಅಲಭ್ಯವಾಗಿರುತ್ತದೆ. ಕರ್ನಾಟಕ ಅರಣ್ಯ ಇಲಾಖೆಯು ಈ ಕಾರ್ಯಕ್ರಮದ ಉಸ್ತುವಾರಿಯನ್ನು ಸೂಕ್ತವಾಗಿ ಮಾಡದಿರುವುದರಿಂದ ಅದು ಯಶಸ್ಸನ್ನು ಪಡೆಯಲಾಗಿಲ್ಲ.

### 4. ಸೋಲಾರ್ (ಸೌರ) ದೀಪಗಳು :

ವಿಶೇಷ ಘಟಕ ಯೋಜನೆಯಲ್ಲಿ 54.84% ಮತ್ತು ಬುಡಕಟ್ಟು ಉಪಯೋಜನೆಯಲ್ಲಿ 54.77% ಯಶಸ್ಸನ್ನು ಈ ಕಾರ್ಯಕ್ರಮ ಕಂಡಿದೆ. ವಿಶೇಷ ಘಟಕ ಯೋಜನೆ ಹಾಗೂ ಬುಡಕಟ್ಟು ಉಪಯೋಜನೆಗಳಲ್ಲಿ ಸಾಧಿಸಲಾಗಿರುವ ಯಶಸ್ಸನ್ನು ಕುರಿತಂತೆ ಮಾಹಿತಿಯನ್ನು ವರ್ಷವಾರು ಈ ಕೆಳಗೆ ನೀಡಲಾಗಿದೆ.

| ಯೋಜನೆ | 2013–14 | 2014–15 | 2015–16 | 2016–17 |
|---|---|---|---|---|
| ವಿಶೇಷ ಘಟಕ ಯೋಜನೆ | 55.10 | 55.76 | 56.67 | 53.84 |
| ಬುಡಕಟ್ಟು ಉಪಯೋಜನೆ | 55.56 | 44.69 | 69.70 | 63.18 |

ಪ್ರಧಾನಮಂತ್ರಿ ಸೌಭಾಗ್ಯ ಯೋಜನೆಯಡಿಯಲ್ಲಿ, ವಿದ್ಯುಚ್ಛಕ್ತಿಯು ಇಂದು, ಬಹುತೇಕ ಗ್ರಾಮೀಣ ಪ್ರದೇಶಗಳನ್ನು ತಲುಪಿದೆ. ಇನ್ನುಳಿದ ಗ್ರಾಮಗಳೂ ಸದ್ಯದಲ್ಲೇ ಈ ಸೌಲಭ್ಯವನ್ನು ಪಡೆಯಲಿವೆ. ಆದರೆ ವಿದ್ಯುಚ್ಛಕ್ತಿ 18 ರಿಂದ 20 ಗಂಟೆಗಳ ಕಾಲ ಸರಬರಾಜಿದ್ದು, ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಇನ್ನೂ ಉತ್ತಮಗೊಳ್ಳಲಿದೆ. ವಿದ್ಯುಚ್ಛಕ್ತಿಯ ಸರಬರಾಜು ನಿಂತು ಹೋದಾಗ ಸೌರ ದೀಪಗಳು ಉಪಯೋಗಕ್ಕೆ ಬರುತ್ತವೆ. ಇವುಗಳ ಕಾರ್ಯನಿರ್ವಹಣೆಗೆ ಜವಾಬ್ದಾರಿಯನ್ನು ಹೊತ್ತಿರುವ ಏಜೆನ್ಸಿಗಳು ಕೆಲ ವಿಭಾಗಗಳಲ್ಲಿ, ಇತರ ವಿಭಾಗಗಳಿಗಿಂತ ಹೆಚ್ಚು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ. ಫಲಾನುಭವಿಗಳ ಕರೆಗಳಿಗೆ ಖಾತರಿ ಅವಧಿಯಲ್ಲಿ ಸಂಬಂಧಿಸಿದ ಏಜೆನ್ಸಿಗಳು ಸ್ಪಂದಿಸದಿರುವುದರಿಂದಲೇ ಸೌರ ದೀಪಗಳ ಯೋಜನೆ ಯಶಸ್ಸನ್ನು ಪಡೆಯಲು ಸಾಧ್ಯವಾಗಿಲ್ಲದಿರುವುದು.

### 5. ಸೋಲಾರ (ಸೌರ) ನೀರಿನ ಹೀಟರ್:

ಈ ಕಾರ್ಯಕ್ರಮ ವಿಶೇಷ ಘಟಕ ಯೋಜನೆಯಲ್ಲಿ 52% ಹಾಗೂ ಬುಡಕಟ್ಟು ಉಪಯೋಜನೆಯಲ್ಲಿ 49.58% ಯಶಸ್ಸನ್ನು ಪಡೆದಿದೆ. ಈ ಕಾರ್ಯಕ್ರಮದ ವರ್ಷವಾರು ಯಶಸ್ಸನ್ನು ಎರಡು ಯೋಜನೆಗಳಲ್ಲೂ ಈ ಕೆಳಗೆ ಶೇಕಡಾವಾರುಗಳಲ್ಲಿ ತೋರಿಸಲಾಗಿದೆ.

| ಯೋಜನೆ | 2013–14 | 2014–15 | 2015–16 | 2016–17 |
|---|---|---|---|---|
| ವಿಶೇಷ ಘಟಕ ಯೋಜನೆ | 62.96 | 46.73 | 44.44 | 49.28 |
| ಬುಡಕಟ್ಟು ಉಪಯೋಜನೆ | 57.89 | 48.00 | 40.00 | 45.28 |

ರಾಜ್ಯದ ವಿವಿಧ ವಿಭಾಗಗಳಲ್ಲಿ ಯಶಸ್ಸಿನ ಪ್ರಮಾಣದಲ್ಲಿ ಭಿನ್ನತೆ ಕಂಡು ಬಂದಿರುತ್ತದೆ. ಪ್ರತಿ ಅರಣ್ಯ ವಿಭಾಗಕ್ಕೂ ಈ ಹೀಟರ್‌ಗಳ ಸರಬರಾಜು ಮಾಡಲು ಗುರುತಿಸಲಾದ ಏಜೆನ್ಸಿಯಿರುತ್ತದೆ. ಹೀಟರ್‌ಗಳನ್ನು ಸರಬರಾಜು ಮಾಡಲಾಗಿದೆ, ಆದರೆ ಅವುಗಳನ್ನು ಚಾಲನೆ ಮಾಡಿರುವುದಿಲ್ಲ ಎಂಬ ದೂರುಗಳು ಕೇಳಿ ಬಂದಿರುತ್ತವೆ. ಹಾಗೆಯೇ ದುರಸ್ತಿ ಕೆಲಸಗಳನ್ನೂ ನಿರ್ವಹಿಸಿಲ್ಲ ಎಂದು

ಹೇಳಲಾಗುತ್ತಿದೆ. ಕುಟುಂಬಗಳು ಅಡುಗೆ ಮಾಡಲು ಅಡುಗೆ ಅನಿಲ ಬಳಸುತ್ತಿದ್ದರೂ ಸ್ನಾನಕ್ಕಾಗಿ ನೀರು ಕಾಯಿಸಲು ಸೌದೆಯನ್ನೇ ಬಳಸುತ್ತಾರೆ ಎಂಬುದು ಗೋಚರವಾಗಿದೆ. ವಿಶೇಷವಾಗಿ, ಮಲೆನಾಡು ಪ್ರದೇಶದಲ್ಲಿ ಈ ಪರಿಸ್ಥಿತಿ ಕಂಡು ಬಂದಿರುತ್ತದೆ. ಇಲ್ಲಿ ಮನೆಗಳು ದೂರದೂರದಲ್ಲಿದ್ದು, ಸೌದೆ ಕೂಡ ಹೇರಳವಾಗಿ ಲಭಿಸುತ್ತಿರುವುದರಿಂದ ಅದರ ಬಳಕೆಯೂ ಹೆಚ್ಚು ಇರುತ್ತದೆ.

## 6. ಸಾಮಾಜಿಕ ಭದ್ರತಾ ನೆಡುತೋಪುಗಳು ಮತ್ತು ಹಣ್ಣಿನ ತೋಟಗಳು:

ಎರಡು ಯೋಜನೆಗಳಲ್ಲೂ ಈ ಕಾರ್ಯಕ್ರಮಗಳು ಹೆಚ್ಚು ವ್ಯಾಪಕವಾಗಿ ಬಳಕೆಯಾಗಿಲ್ಲ. ಸಾಮಾಜಿಕ ಭದ್ರತಾ ನೆಡುತೋಪುಗಳ ಯೋಜನೆಯಡಿ ಎಲ್ಲ ಕಾರ್ಯಕ್ರಮಗಳೂ ಆರು ವಿಭಾಗಗಳಲ್ಲಿ ಜಾರಿಯಲ್ಲಿವೆ. ಹೂದೋಟಗಳ ಯೋಜನೆಯು ವಿಶೇಷ ಘಟಕ ಯೋಜನೆಯಲ್ಲಿ 12 ವಿಭಾಗಗಳಲ್ಲೂ ಬುಡಕಟ್ಟು ಉಪಯೋಜನೆಯಲ್ಲಿ 10 ವಿಭಾಗಗಳಲ್ಲೂ ಜಾರಿಯಲ್ಲಿವೆ. ಈ ಯೋಜನೆಯ ಯಶಸ್ಸು ಎಲ್ಲ ವಿಭಾಗಗಳಲ್ಲೂ ಏಕಪ್ರಕಾರವಾಗಿಲ್ಲ. ಸಾಮಾನ್ಯವಾಗಿ ತೇಗ, ಸಪೋಟ, ಮಾವು, ಹುಣಸೆ ಮುಂತಾದ ಸಸ್ಯಗಳನ್ನು ನೆಡಲಾಗಿರುತ್ತದೆ. ಯಾವ ಫಲಾನುಭವಿಗಳು ತಮಗೆ ನೀಡಿದಂಥ ಸಸ್ಯಗಳನ್ನು ಸರಿಯಾದ ರೀತಿಯಲ್ಲಿ ಪೋಷಣೆ ಮಾಡಿದ್ದಾರೋ, ಅಂಥ ನೆಡುತೋಪುಗಳಲ್ಲಿ ಬೆಳೆ ಚೆನ್ನಾಗಿದ್ದು, ಎಲ್ಲಿ ಫಲಾನುಭವಿಗಳಿಂದ ಅಲಕ್ಷ್ಯಕ್ಕೆ ಒಳಗಾಗಿವೆಯೇ ಅಂತಹ ಕಡೆಗಳಲ್ಲಿ ನಿರೀಕ್ಷಿತ ಫಲ ದೊರೆತಿಲ್ಲ. ಅನೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಫಲಾನುಭವಿಗಳ ಬಳಿ ನೆಡು ತೋಪುಗಳಿಗಾಗಿ ಮೀಸಲಿಡುವಷ್ಟು ಭೂಮಿ ಇರುವುದಿಲ್ಲ. ಮಲೆನಾಡು ಪ್ರದೇಶದಲ್ಲಿ, ಅದರಲ್ಲೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳ. ಮತ್ತು ಪರಿಶಿಷ್ಟ ಪಂಗಡಗಳ ಜನರು ಅರಣ್ಯ ಭೂಮಿಯನ್ನು ಅತಿಕ್ರಮವಾಗಿ ಆಕ್ರಮಿಸಿಕೊಂಡಿದ್ದಾರೆ. ಇಂಥ ಭೂ ಪ್ರದೇಶಗಳನ್ನು ಸಾಮಾಜಿಕ ಭದ್ರತಾ ನೆಡುತೋಪುಗಳನ್ನು ಮತ್ತು ಹಣ್ಣಿನ ತೋಟಗಳನ್ನು ಬೆಳೆಸಲು ಅರಣ್ಯ ಇಲಾಖೆ ನೀಡದಿರುವುದು ಸಮರ್ಥನೀಯವಾದ ಸರಿಯಾದ ನಿರ್ಧಾರವಾಗಿರುತ್ತದೆ.

## 7. ಮೇವಿನ ತೋಪುಗಳು :

ಈ ಕಾರ್ಯಕ್ರಮ ಹೆಚ್ಚು ವ್ಯಾಪಕವಾಗಿ ಬಳಸಲ್ಪಟ್ಟಿಲ್ಲ. ಈ ಕಾರ್ಯಕ್ರಮದ ಮೂಲ ಉದ್ದೇಶವೆಂದರೆ, ಫಲಾನುಭವಿಗಳನ್ನು ತಮ್ಮ ಜಾನುವಾರುಗಳಿಗೆ ಮೇವನ್ನು ಒದಗಿಸುವಂತೆ ಉತ್ತೇಜನ ನೀಡುವುದು. ಅನೇಕ ಫಲಾನುಭವಿಗಳ ವಿಚಾರದಲ್ಲಿ ಈ ಯೋಜನೆ ಯಶಸ್ಸನ್ನು ಕಂಡಿಲ್ಲ. ಮತ್ತೆ ಕೆಲವರು ಕೆಲ ವರ್ಷಗಳು ಈ ಯೋಜನೆಯ ಪ್ರಯೋಜನವನ್ನು ಪಡೆದು ಮೇವನ್ನು ಬೆಳೆದಿದ್ದಾರೆ. ಒಟ್ಟಾರೆ ಫಲಾನುಭವಿಗಳ ನಿರಾಸಕ್ತಿಯೇ ಈ ಕಾರ್ಯಕ್ರಮದ ಅಪಯಶಸ್ಸಿಗೆ ಮುಖ್ಯ ಕಾರಣವಾಗಿದೆ. ಮತ್ತೊಂದು ಕಾರಣವೆಂದರೆ ನೀರಾವರಿ ಸೌಲಭ್ಯ ದೊರೆಯದೇ ಇರುವುದು ಎಂದು ಹೇಳಬಹುದು.

## 8. ಜೇನುನೊಣ  ಸಾಕುವ ಪೆಟ್ಟಿಗೆಗಳು :

ಫಲಾನುಭವಿಗಳಿಗೆ ಐದು ಪೆಟ್ಟಿಗೆಗಳನ್ನು ಒದಗಿಸಲಾಗಿದೆ. ಆದರೆ ಅವರಿಗೆ ತಾಂತ್ರಿಕ ತರಬೇತಿ ನೀಡದಿರುವುದು ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಮೇಲುಸ್ತುವಾರಿ ಇಲ್ಲದಿರುವುದು ಈ ಕಾರ್ಯಕ್ರಮ ಯಶಸ್ಸನ್ನು ಕಾಣದಿರುವುದಕ್ಕೆ ಕಾರಣಗಳಾಗಿವೆ. ವಿಶೇಷ ಘಟಕ ಯೋಜನೆಯಲ್ಲಿ ಯಶಸ್ಸು 41.13% ಆದರೆ ಬುಡಕಟ್ಟು ಉಪ ಯೋಜನೆಯಲ್ಲಿ ಈ ಯಶಸ್ಸಿನ ಪ್ರಮಾಣ 36.25%. ವರ್ಷವಾರು, ಯೋಜನಾವಾರು ಯಶಸ್ಸನ್ನು ಈ ಕೆಳಗೆ ಶೇಕಡಾವಾರುಗಳಲ್ಲಿ ತೋರಿಸಲಾಗಿದೆ.

| ಯೋಜನೆ | 2013–14 | 2014–15 | 2015–16 | 2016–17 |
|---|---|---|---|---|
| ವಿಶೇಷ ಘಟಕ ಯೋಜನೆ | 40.00 | 58.33 | – | 39.23 |
| ಬುಡಕಟ್ಟು ಉಪಯೋಜನೆ | 71.45 | 28.57 | – | 33.90 |

ಯಶಸನ್ನು ಪಡೆದಿದ್ದಾರೆ ಎಂದು ಗುರುತಿಸಲಾಗಿರುವ ಫಲಾನುಭವಿಗಳೂ ಕೇವಲ ಪೆಟ್ಟಿಗೆಗಳನ್ನು ನಿರ್ವಹಿಸುತ್ತಿದ್ದಾರೆಯೇ ಹೊರತು, ಮಾರಾಟಕ್ಕಾಗಿ ಜೇನುತುಪ್ಪವನ್ನು ತಯಾರಿಸಲು ಸಾಧ್ಯವಾಗಿಲ್ಲ. ತೀರಾ ಕಡಿಮೆ ಎನಿಸುವಷ್ಟು ಪ್ರಮಾಣದ ಜೇನುತುಪ್ಪ ಲಭ್ಯವಾಗಿದ್ದು, ಅದು ಸ್ವಂತ ಬಳಕೆಗಾಗಿ ಹಾಗೂ ಅವರ ಸ್ನೇಹಿತರಿಗೆ ನೀಡಲು ಬಳಕೆಯಾಗಿದೆ.

## 9. ಗಳಗಳು/ಬಿದಿರನ ಸರಬರಾಜು :

ಬಿದಿರಿನ ಸರಬರಾಜು ಚಿಕ್ಕಬಳ್ಳಾಪುರ, ಯಲ್ಲಾಪುರ ಮತ್ತು ಶಿರಸಿ ವಿಭಾಗಗಳಿಗೆ ಮಾತ್ರ ಸೀಮಿತವಾಗಿದೆ. ಇತರ ವಿಭಾಗಗಳಲ್ಲಿ ಮರದ ಗಳಗಳನ್ನು ಮಾತ್ರ ಸರಬರಾಜು ಮಾಡಲಾಗಿದೆ. ಫಲಾನುಭವಿಗಳು ಗಳಗಳನ್ನು ಬುಟ್ಟಿ ಹಾಗೂ ಚಾಪೆಗಳನ್ನು ತಯಾರಿಸಲು ಉಪಯೋಗಿಸಿದ್ದಾರೆ. ಇವುಗಳನ್ನು ಮಾರಾಟ ಮಾಡಿರುವುದಾಗಿ ಅವರು ಒಪ್ಪಿಕೊಂಡಿದ್ದರೂ, ಇದರಿಂದ ತಮಗೆ ಸಂದ ಲಾಭವೆಷ್ಟು ಎಂಬುದು ಖಚಿತವಾಗಿ ಅವರಿಗೆ ತಿಳಿದು ಬಂದಿಲ್ಲ. ಅನೇಕ ವಿಭಾಗಗಳಲ್ಲಿ ಫಲಾನುಭವಿಗಳಿಗೆ ನೀಡಲಾದ ಗಳಗಳನ್ನು ಮನೆ ನಿರ್ಮಾಣ ಅಥವಾ ದುರಸ್ತಿ ಮಾಡಲು, ಜಾನುವಾರುಗಳಿಗಾಗಿ ಕೊಟ್ಟಿಗೆ ಕಟ್ಟಲು, ಕೃಷಿ ಭೂಮಿಗೆ ಜಾನುವಾರುಗಳು ಪ್ರವೇಶ

ಮಾಡದಂತೆ ಬೇಲಿ ಹಾಕಲು ಬಳಸಲಾಗಿದೆ. ಕೆಲವು ಫಲಾನುಭವಿಗಳು ಮಾತ್ರ ತಮಗೆ ನೀಡಿದ ಗಳಗಳು ಉಪಯೋಗಿಸುವಂಥ ಸ್ಥಿತಿಯಲ್ಲಿ ಇರಲಿಲ್ಲವಾದ್ದರಿಂದ, ಅವುಗಳನ್ನು ತಾವು ಉದ್ದೇಶಿತ ಕಾರ್ಯಗಳಿಗಾಗಿ ಬಳಸಿಕೊಂಡಿಲ್ಲ ಎಂದು ತಿಳಿಸಿದ್ದಾರೆ.

**ಶಿಫಾರಸ್ಸುಗಳು ಹಾಗೂ ನೀತಿ ಸಲಹೆಗಳು**

1. ಗ್ರಾಮೀಣ ಪ್ರದೇಶಗಳಲ್ಲಿ ಅಡುಗೆ ಅನಿಲದ ಸರಬರಾಜು ಹೆಚ್ಚಾಗುತ್ತಿದೆ. ಆದರೆ ಸಿಲಿಂಡರ್‌ಗಳ ಮರುಭರ್ತಿ ಮಾಡಲು, ಆರ್ಥಿಕ ಸಂಪನ್ಮೂಲಗಳಿಲ್ಲದಿರುವಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳು ಇಂದಿಗೂ ಇವೆ. ಕರ್ನಾಟಕ ಅರಣ್ಯ ಇಲಾಖೆ, ಅರಣ್ಯ ಅಂಚಿನ 5 ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಎಲ್ಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ 25% ಹೆಚ್ಚುವರಿ ಸಹಾಯಧನ ನೀಡಬೇಕು. ಅರಣ್ಯ ರಕ್ಷಣೆಗಾಗಿ ಈ ಕುಟುಂಬಗಳಿಗೆ ಸೋಲಾರ್ (ಸೌರ) ಕುಕ್ಕರ್ ನೀಡಬೇಕಾಗಿದೆ.

2. ಸೋಲಾರ್ ದೀಪಗಳನ್ನು ಫಲಾನುಭವಿಗಳಿಗೆ ನೀಡುವುದು ಒಂದು ಉಪಯುಕ್ತ ಕಾರ್ಯಕ್ರಮ. ಇವುಗಳನ್ನು ಸರಬರಾಜು ಮಾಡುವ ಏಜೆನ್ಸಿಗಳು ಗ್ಯಾರಂಟಿ ಅವಧಿಯಲ್ಲಿ ಸಮಸ್ಯೆಗಳು ತಲೆದೋರಿದಾಗ ಸ್ಪಂದಿಸಬೇಕು ಹಾಗೂ ಈ ಪ್ರಕ್ರಿಯೆಯನ್ನು ಕರ್ನಾಟಕ ಅರಣ್ಯ ಇಲಾಖೆ ಉಸ್ತುವಾರಿ ಮಾಡಬೇಕು.

3. ಸೋಲಾರ್ ನೀರಿನ ಹೀಟರ್‌ಗಳನ್ನು ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಸಮುದಾಯಗಳಿಗೆ ಒದಗಿಸುವುದು, ಅವರ ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದರಿಂದ, ಈ ಕಾರ್ಯಕ್ರಮವನ್ನು ಹೆಚ್ಚು ವ್ಯಾಪಕವಾಗಿ ಕೈಗೊಳ್ಳಬೇಕು. ಆದರೆ ಕೆಲ ಎಚ್ಚರಿಕೆಗಳನ್ನು ವಹಿಸುವ ಅಗತ್ಯವಿದೆ. ಅಧಿಕವಾಗಿ ಸೃಷ್ಟಿಯಾಗುವ ಕಾವನ್ನು ಹೊರಹಾಕಲು ಸೂಕ್ತವಾದ ಪೈಪುಗಳನ್ನು ಅಳವಡಿಸಬೇಕಾಗಿದೆ. ಸರಿಯಾದ ರೀತಿಯಲ್ಲಿ ಪೈಪುಗಳನ್ನು ನಿರ್ವಹಣೆ ಮಾಡಿದಾಗ, ಬಿಸಿ ನೀರು ನಿರಂತರವಾಗಿ ಸರಬರಾಜಾಗುತ್ತದೆ. ಈ ವಸ್ತುಗಳನ್ನು ಸರಬರಾಜು ಮಾಡುವ ಏಜೆನ್ಸಿಗಳ ಉಸ್ತುವಾರಿ ಕರ್ನಾಟಕ ಅರಣ್ಯ ಇಲಾಖೆಯಿಂದ ನಡೆಸಬೇಕಾಗಿದೆ.

4. ಇಂಧನ ಉಳಿಸುವ ಒಲೆಗಳನ್ನು ಫಲಾನುಭವಿಗಳಿಗೆ 2013–14ರಲ್ಲಿ ಹಾಗೂ 2014–15ರಲ್ಲಿ ಒದಗಿಸಲಾಗಿತ್ತು. ಜನರು ಅಡುಗೆ ಅನಿಲವನ್ನು ಬಳಸಲಾರಂಭಿಸಿದಾಗ ಈ ಯೋಜನೆಯನ್ನು ಈಗ ಕೈ ಬಿಡಲಾಗಿದೆ. ಗ್ಯಾಸ್ ಬೆಲೆ ಹೆಚ್ಚಾದರೆ, ಕರ್ನಾಟಕ ಅರಣ್ಯ ಇಲಾಖೆ ಸರಳ ಒಲೆಗಳ ಸರಬರಾಜನ್ನು ಪುನಃ ಆರಂಭಿಸಬಹುದು.

5. ಸಾಮಾಜಿಕ ಭದ್ರತಾ ನೆಡು ತೋಪುಗಳು ಹಾಗೂ ಹಣ್ಣಿನ ತೋಟಗಳ ಸಮರ್ಥ ನಿರ್ವಹಣೆ ಆಗಿರುವಂಥ ಪ್ರಕರಣಗಳಲ್ಲಿ, ಈ ಎರಡು ಕಾರ್ಯಕ್ರಮಗಳು ಯಶಸ್ಸನ್ನು ಕಂಡಿವೆ. ಆದರೆ ಅನೇಕ ಫಲಾನುಭವಿಗಳು ನೆಡುತೋಪುಗಳನ್ನು ಅಲಕ್ಷಿಸಿರುವುದರಿಂದ ಅವು ಬೆಳೆಯಲಾಗಿಲ್ಲ. ಕರ್ನಾಟಕ ಅರಣ್ಯ ಇಲಾಖೆಯಿಂದ ಸೂಕ್ತ ಉಸ್ತುವಾರಿಯ ಅಗತ್ಯವಿರುತ್ತದೆ. ಮಳೆಗಾಲ ಆರಂಭವಾಗುವ ಸಮಯಕ್ಕೆ ಸರಿಯಾಗಿ ಸಸಿಗಳ ಸರಬರಾಜು ಆಗಬೇಕು. ಸಾಮಾನ್ಯವಾಗಿ, ಕರ್ನಾಟಕ ಅರಣ್ಯ ಇಲಾಖೆಯು, ಫಲಾನುಭವಿಗಳು ತಮ್ಮ  ನೆಡುವ ಕಾರ್ಯ ಪೂರ್ಣವಾದ ಮೇಲೆ ಈ ಸಸಿಗಳನ್ನು ಒದಗಿಸುತ್ತಿದೆ. ಈ ಪದ್ಧತಿಯನ್ನು ನಿಲ್ಲಿಸಬೇಕಾಗಿದೆ.

6. ಹಣ್ಣಿನ ತೋಟಗಳಿಗೆ ಅವಶ್ಯವಾದ ಸಸಿಗಳು ಹಾಗೂ ಕಸಿ ಮಾಡಿದ ಸಸ್ಯ ಪ್ರಭೇದಗಳನ್ನು ಕರ್ನಾಟಕ ಅರಣ್ಯ ಇಲಾಖೆಯೇ ಬೆಳೆಯಬೇಕು. ಖಾಸಗಿ ನರ್ಸರಿಗಳಿಂದ ಅಥವಾ ತೋಟಗಾರಿಕೆ ಇಲಾಖೆಯಿಂದ ಈ ಸಸಿಗಳನ್ನು ಕೊಳ್ಳುವುದನ್ನು ನಿಲ್ಲಿಸಬೇಕು. ಆದರೆ ಇಲಾಖೆಯ ಬಳಿ ರೈತರು ಕೇಳುವಂಥ ಹಣ್ಣಿನ ಸಸಿಗಳು ಇಲ್ಲದಿದ್ದಲ್ಲಿ, ತೋಟಗಾರಿಕೆ ಇಲಾಖೆಯೊಡನೆ ಒಡಂಬಡಿಕೆ ಮಾಡಿಕೊಂಡು, ನೆಡುವ ಸಮಯ ಬರುವುದಕ್ಕೆ ಮುನ್ನವೇ ರೈತರಿಗೆ ಈ ಸಸಿಗಳನ್ನು ಒದಗಿಸಬೇಕಾಗಿದೆ.

7. ಮೇವು ಬೆಳೆಯುವ ಜಮೀನುಗಳು ಯಶಸ್ವಿಯಾಗಿಲ್ಲ. ಫಲಾನುಭವಿಗಳ ಆಯ್ಕೆ ಕೂಡ ಸೂಕ್ತ ರೀತಿಯಲ್ಲಿ ಆಗಿರುವುದಿಲ್ಲ. ರಾಜ್ಯದಲ್ಲಿ ಮೇವನ್ನು ಬೆಳೆಸುವ ಜವಾಬ್ದಾರಿಯನ್ನು ಪಶು ಪಾಲನಾ ಇಲಾಖೆ ವಹಿಸಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಪಶು ಸಂಗೋಪನಾ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಗಳೂ ಕರ್ನಾಟಕ ಅರಣ್ಯ ಇಲಾಖೆಯೊಡನೆ ಕೈ ಜೋಡಿಸಬಹುದು. ಕೃಷಿ ಭೂಮಿಯ ದಂಡೆಗಳ ಮೇಲೆ ಮೇವು ಬೆಳೆಯುವಂಥ ಯೋಜನೆಯನ್ನು ರೂಪಿಸಲು ಸಾಧ್ಯವಿದೆ. ಇದನ್ನು ಹಣ್ಣಿನ ತೋಟಗಳಲ್ಲೂ ಮಾಡಬಹುದು. ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಈ ಎರಡು ಯೋಜನೆಗಳಿಂದ ಜಾನುವಾರುಗಳಿಗೆ ಮೇವು ಒದಗಿಸಲು ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಕೈ ಬಿಡಬಹುದು

8. ಫಲಾನುಭವಿಗಳಿಗೆ ಗಳಗಳನ್ನು ನೀಡುವ ಕಾರ್ಯಕ್ರಮ ಸಾಕಷ್ಟು ಉಪಯುಕ್ತವಾಗಿದೆಯೆಂದು ಹೇಳಬಹುದು. ಬಿದಿರು ಸರಬರಾಜು ಮಾಡುವ ಪ್ರಯತ್ನಕ್ಕೆ ತೀರಾ ಕಡಿಮೆ ಗೋಚರತೆ ದೊರೆತಿದ್ದು, ಈ ಕಾರ್ಯಕ್ರಮಕ್ಕೆ ಹೆಚ್ಚು ಚಾಲ್ತಿ ನೀಡಬೇಕಾಗಿರುವುದಲ್ಲದೇ ಫಲಾನುಭವಿಗಳನ್ನು ಚಾಪೆ, ಬುಟ್ಟಿ ಮುಂತಾದುವನ್ನು ತಯಾರು ಮಾಡಲು ತರಬೇತಿ

ನೀಡಬೇಕು. ಇದರಿಂದ ಜೀವನ ನಿರ್ವಹಣೆಗಾಗಿ, ಅವರು ಸ್ವಲ್ಪ ಮಟ್ಟಿನ ಆದಾಯವನ್ನು ಗಳಿಸಬಹುದು. ಎಲ್ಲ ವಿಭಾಗಗಳಲ್ಲೂ ಫಲಾನುಭವಿಗಳಿಗೆ ಒದಗಿಸುವ ಗಳಗಳ/ ಪ್ರಭೇದಗಳ/ವರ್ಗಗಳ ಗುಣಮಟ್ಟವನ್ನು ನಿಗದಿಪಡಿಸಿ, ಅದರ ಮೇಲುಸ್ತುವಾರಿಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಅರಣ್ಯ ಇಲಾಖೆ ತೆಗೆದುಕೊಳ್ಳಬೇಕು.

9. ಜೈವಿಕ ಇಂಧನ ಘಟಕಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇವುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಫಲಾನುಭವಿಗಳಿಗೆ ತರಬೇತಿ ನೀಡದಿರುವುದರಿಂದ, ಈ ಪರಿಸ್ಥಿತಿ ಉಂಟಾಗಿರುತ್ತದೆ. ಅಲ್ಲದೇ, ಜಾನುವಾರುಗಳನ್ನು ಸಾಕಿರದ ಕುಟುಂಬಗಳ ವಾಸಸ್ಥಾನದಲ್ಲಿ ಈ ಘಟಕಗಳನ್ನು ಸ್ಥಾಪಿಸಿರುವುದು ಸೂಕ್ತವಲ್ಲ. ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ, ಕನಿಷ್ಠ 3 ಜಾನುವಾರುಗಳಾದರೂ ಇರುವಂಥ ಮನೆಗಳನ್ನು ಅರಣ್ಯ ಇಲಾಖೆ ಆಯ್ಕೆ ಮಾಡಬೇಕು. ಹಾಗೆ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಈ ಘಟಕಗಳನ್ನು ನಿರ್ವಹಿಸುವ ತರಬೇತಿಯನ್ನು ನೀಡಬೇಕು.

10. ತಾಂತ್ರಿಕ ನೆರವು ದೊರೆಯದ ಕಾರಣ ಜೇನು ಸಾಕುವ ಪೆಟ್ಟಿಗೆಗಳನ್ನು ನಿರ್ವಹಿಸುವಲ್ಲಿ, ಜೇನುನೊಣಗಳ ಸಾಕಾಣಿಕೆ ಮಾಡುವಲ್ಲಿ ಫಲಾನುಭವಿಗಳಿಗೆ ಸಾಧ್ಯವಾಗಿರುವುದಿಲ್ಲ. ಇದು ಜೇನುತುಪ್ಪದ ಸಂಗ್ರಹಣೆಗೂ ಅನ್ವಯಿಸುತ್ತದೆ. ಈ ಕಾರ್ಯಕ್ರಮದ ಯಶಸ್ವಿ ನಿರ್ವಹಣೆಯಾಗಬೇಕಾದರೆ ಫಲಾನುಭವಿಗಳ ಆಯ್ಕೆ, ಅವರಿಗೆ ತರಬೇತಿ ನೀಡುವುದು, ಸೂಕ್ತವಾದ ಪೆಟ್ಟಿಗೆಗಳನ್ನು ಸರಬರಾಜು ಮಾಡುವುದು ಹಾಗೂ ಜೇನುನೊಣಗಳನ್ನು ಒದಗಿಸುವುದು ಈ ಎಲ್ಲ ಜವಾಬ್ದಾರಿಗಳ ನಿರ್ವಹಣೆಯು ಕರ್ನಾಟಕ ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿ ನಡೆಯಬೇಕು.